# ಹೆಸರು ಬೇಡ, ಊರು ಬೇಡ

ಸುರಪುರದ ಗುಡಿಯ ಪೌಳಿಯ ರಿಪೇರಿ:
ಕುಂಬಾರಪೇಟೆಯ ವೆಂಕಣ್ಣನವರು.

ಗರುಡಗಂಬ, ಅರಳಿಮರದ ಕಟ್ಟೆ:
ದೇವಪುರದ ಅಮರಪ್ಪನವರು.

ವಿಮಾನ ಗೋಪುರದ ಸುಣ್ಣ–ಬಣ್ಣ:
ರಂಗಂಪೇಟೆಯ ನಾರಾಯಣ ಶೆಟ್ಟಿಯವರು.

ಪ್ರಾಕಾರದ ಹಾಸುಗಲ್ಲು, ಸಣ್ಣ–ಪುಟ್ಟ ರಿಪೇರಿಗಳು:
ಶಹಾಪುರದ ಭೀಮರಾವ್.

ಪ್ರಸಾದ, ಪಾನಕ, ಅನ್ನಸಂತರ್ಪಣೆ:
ಸರಸ್ವತಿ ಭವನದ ಕೆ.ಜಿ. ಭಟ್ಟರು.

ನಾವು–ನೀವು, ಪಶುಪಕ್ಷಿಗಳು, ಗಿಡಮರಗಳು:
ಹೆಸರು ಬೇಡ, ಊರು ಬೇಡ.

● **ತಿರುಮಲ ಮುಂಡರ್ಗಿ**

